ದಿನಾಂಕಃ **30.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರಿಂದ :**

ನಾನು ಬಿಸಿನೆಸ್ ಮಾಡುತ್ತೇನೆ. 2 ಮತ್ತು 3 ನೇ ಪ್ರತಿವಾದಿಗಳು ನನಗೆ 2008 ರಿಂದ ಪರಿಚಯವಿರುತ್ತಾರೆ. ಸೈಟ್ ಖರೀದಿಗೆ ಸಂಬಂಧಿಸಿದಂತೆ ನಿಮ್ಮನ್ನು ಯಾರು ಭೇಟಿಯಾಗಿರುತ್ತಾರೆ ಎಂದರೆ ಸಾಕ್ಷಿಯು 2008 ರಲ್ಲಿ ಕಂಪನಿಯ Representative ಭೇಟಿಯಾಗಿರುತ್ತಾರೆ, ಅವರ ಹೆಸರು ನೆನಪಿಲ್ಲ ಎನ್ನುತ್ತಾರೆ. ನಿಪಿ-1 ದಾಖಲೆಯು ಬೆಂಗಳೂರಿನಲ್ಲಿ ಆಗಿರುತ್ತದೆ. ನಿಪಿ-1 ನ್ನು ತಯಾರು ಮಾಡುವ ಸಂದರ್ಭದಲ್ಲಿ ಯಾರು ಯಾರು ಇದ್ದರು ಎಂದು ನೆನಪಿಲ್ಲ. ನಿಪಿ-1 ನ್ನು ತಯಾರು ಮಾಡುವಾಗ 3 ಜನ ಪ್ರತಿವಾದಿಗಳು ಹಾಜರಿದ್ದರು ಎಂದರೆ ಹೌದು. ದಾಖಲೆ ಮಾಡಿಕೊಳ್ಳುವಾಗ ಕೆಲವು ದಾಖಲೆಗಳನ್ನು ನಾನು ಪರಿಶೀಲಿಸಿರುತ್ತೇನೆ. ಆ ಸಮಯದಲ್ಲಿ ಪ್ರತಿವಾದಿಗಳು ಸದರಿ ಲೇ-ಔಟ್ ಗೆ ಕೆಲವು ಅನುಮತಿಗಳು ಬರುವುದು ಬಾಕಿ ಇರುತ್ತದೆ ಎಂದು ತಿಳಿಸಿದ್ದರು. ಒಪ್ಪಂದಕ್ಕೂ ಮುಂಚೆ ವಕೀಲರ ಸಲಹೆ ಪಡೆದಿಲ್ಲ. ನನಗೆ ಸದರಿ ಆಸ್ತಿಯ ಸರ್ವೇ ನಂಬರ್ ಗಳು ಅಷ್ಟಾಗಿ ನೆನಪಿಲ್ಲ. ನಿಪಿ-1 ರಲ್ಲಿ ನಿಖರವಾಗಿ ಸೈಟ್ ನಂಬರ್ ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಫೈನಲ್ ನೋಟೀಸಿನಲ್ಲಿ ಪ್ರತಿವಾದಿಯವರೇ ಸೈಟ್ ನಂಬರ್ ತಿಳಿಸಿರುತ್ತಾರೆ ಎನ್ನುತ್ತಾರೆ. ನಿಪಿ-1 ರಲ್ಲಿ ನಿಖರವಾದ ಸೈಟನ್ನು ಮಾರಾಟ ಮಾಡುತ್ತೇವೆಂದು ಒಪ್ಪಂದ ಆಗಿಲ್ಲ ಎಂದರೆ ಸರಿ. ನಿಪಿ-1 ರ ಲ್ಲಿ 3 ನೇ ಪ್ರತಿವಾದಿಯ ಸಹಿ ಇಲ್ಲ ಎಂದರೆ ಸರಿ. ನಿಪಿ-1 ರಲ್ಲಿರುವ 2 ನೇ ಪ್ರತಿವಾದಿಯ ಸಹಿಗೂ, ನಿಪಿ-2 ಹಾಗೂ 3 ರಲ್ಲಿರುವ 2 ನೇ ಪ್ರತಿವಾದಿಯ ಸಹಿಗೂ ವ್ಯತ್ಯಾಸವಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ಮತ್ತು 3 ರಲ್ಲಿರುವ ಸಹಿಗಳು 2 ನೇ ಪ್ರತಿವಾದಿಯದ್ದಾಗಿದ್ದು, ನಿಪಿ-1 ರಲ್ಲಿ 2 ನೇ ಪ್ರತಿವಾದಿಯ ಸಹಿ ಇರುವುದಿಲ್ಲ, ಅದು ಅವರ ಫೋರ್ಜರಿ ಸಹಿಯಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ನನ್ನ

ಮುಂದೆಯೇ ಸಹಿ ಮಾಡಿರುತ್ತಾರೆ ಎನ್ನುತ್ತಾರೆ.

**2.** ಸೈಟ್ ನಂಬರ್ 519 ಕ್ಕೆ ಒಪ್ಪಂದ ಪತ್ರ ಮಾಡಿಕೊಟ್ಟಿರುತ್ತಾರೆಯೇ ಎಂದರೆ ಇಲ್ಲ ಸಾಕ್ಷಿಯು ಮುಂದುವರೆದು ಫೈನಲ್ ನೋಟೀಸಿನಲ್ಲಿ ಇರುತ್ತದೆ ಎನ್ನುತ್ತಾರೆ. ಸೈಟ್ ನಂಬರ್ 519 ಯಾವ ಸರ್ವೆ ನಂಬರಿನಲ್ಲಿ ಬರುತ್ತದೆ ಎಂದು ಗೊತ್ತಿಲ್ಲ.

**3.** ಪ್ರತಿವಾದಿಯವರು ದಿನಾಂಕಃ 27.07.2010 ರಂದು ನನಗೆ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಯು ಒಪ್ಪಿಕೊಂಡಿದ್ದು, ಅದನ್ನು ಗುರುತಿಸಲು ವಾದಿಯ ಪರ ವಕೀಲರು ಸದರಿ ದಾಖಲೆ ನಕಲು ಪ್ರತಿ ಎಂದು ತಕರಾರು ಮಾಡಿದ್ದು, ಅದನ್ನು ತಕರಾರಿಗೊಳಪಟ್ಟು ಅದನ್ನು **ನಿಡಿ-1** ಎಂದು ಗುರುತಿಸಲಾಯಿತು.

**4.** ಪ್ರತಿವಾದಿಯವರು ದಿನಾಂಕಃ 27.12.2010 ಮತ್ತು 29.12.2010 ರಂದು ನನಗೆ ಅಂಚೆ ಮೂಲಕ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ತಲುಪಿಲ್ಲ ಎನ್ನುತ್ತಾರೆ. 2010 ರಿಂದ 2019 ರವರೆಗೆ ನಾವು ಪ್ರತಿವಾದಿಗಳನ್ನು ಸಂಪರ್ಕಿಸಿರುವುದಿಲ್ಲ ಎಂದರೆ ಸುಳ್ಳು, ಸಾಕ್ಷಿಯು ಮುಂದುವರೆದು ನಾವು ಅವರನ್ನು ಭೇಟಿಯಾದಾಗಲೆಲ್ಲಾ ಅವರು ಕೆಲವು ಅನುಮತಿಗಳು ಬಂದಿರುವುದಿಲ್ಲವೆಂದು ಪ್ರತಿಬಾರಿಯು ಕಾಲಾವಕಾಶ ಕೇಳಿರುತ್ತಾರೆ ಎನ್ನುತ್ತಾರೆ. 2010 ರಿಂದ 2019 ರವರೆಗೆ ಪ್ರತಿವಾದಿಗಳಿಗೆ ವಕೀಲರ ನೋಟೀಸ್ ನೀಡಿಲ್ಲ. ಮುಖ್ಯ ವಿಚಾರಣೆಯ 3 ನೇ ಪ್ಯಾರಾದಲ್ಲಿ ಹೇಳಿರುವಂತಹ ಫೈನಲ್ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನ್ಯಾಯಾಲಯದ ಕಡತವನ್ನು ಪರಿಶೀಲಿಸಿ ಇಲ್ಲಿ ಇರುವುದಿಲ್ಲ ಆದರೆ ಆ ದಾಖಲೆ ಇದೆ ಎನ್ನುತ್ತಾರೆ.

**5.** ನಿಪಿ-3 ರ ಪ್ರಕಾರ ದಿಃ11.03.2020 ರಂದು ಆಸ್ತಿ ನೋಂದಣಿ ಮಾಡಿಸಲು ಬನ್ನಿ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ದಿಃ 11.03.2020 ರಂದು ನೀವು ನೋಂದಣಿ ಮಾಡಿಸಲು

ಹೋಗಿರುತ್ತೀರಾ ಎಂದರೆ ಸಾಕ್ಷಿ ಆಗ ಕೋವಿಡ್-19 ಪ್ರಾರಂಭವಾಗಿತ್ತು, ಲಾಕ್‌ಡೌನ್ ಇತ್ತು ಹಾಗಾಗಿ ಹೋಗಿಲ್ಲ ಎನ್ನುತ್ತಾರೆ. ನಂತರದಲ್ಲಿ ಅವರೇ ಸೇಲ್‌ಡೀಡ್ ಡ್ರಾಫ್ಟ್ ಕಳುಹಿಸಿದ್ದರು, ನಾವು ಕೆ-2 ಚಲನ್ ಪಡೆದುಕೊಂಡು ತಯಾರಿದ್ದೆವು, ಅವರೇ ನೋಂದಣಿಗೆ ಬಂದಿರುವುದಿಲ್ಲ ಎನ್ನುತ್ತಾರೆ. ದಿಃ 11.03.2020 ರಂದು ಕೆ-2 ಚಲನ್ ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿ ಅವರು ಸೇಲ್‌ಡೀಡ್ ಡ್ರಾಫ್ಟ್ ಕಳುಹಿಸಿರಲಿಲ್ಲ ಹಾಗೂ ಕೋವಿಡ್-19 ಇತ್ತು ಆ ಕಾರಣದಿಂದ ಚಲನ್ ಪಡೆದುಕೊಂಡಿಲ್ಲ ಎನ್ನುತ್ತಾರೆ. ಪ್ರತಿವಾದಿ ಕಛೇರಿಯಲ್ಲಿರುವ ಮುರಳಿರವರು ದಿಃ 07.10.2020 ರಂದು ಕೆ-2 ಚಲನ್ ಪಡೆದುಕೊಳ್ಳಿ ಎಂದು ನನಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದರು. ಅವರು ದೂರವಾಣಿ ಕರೆ ಮಾಡಿದ್ದ ಬಗ್ಗೆ ದಾಖಲೆ ಹಾಜರುಪಡಿಸುತ್ತೀರಾ ಎಂದರೆ ಹಾಜರುಪಡಿಸಬಹುದು ಎನ್ನುತ್ತಾರೆ. ಸದರಿ ದೂರವಾಣಿ ಸಂಖ್ಯೆ ಹೇಳಬಹುದೇ ಎಂದರೆ ಸಾಕ್ಷಿ ಅವರ ಮೊಬೈಲನ್ನು ತೆಗೆದು ಮುರಳಿರವರ ಸಂಖ್ಯೆ 9986690702 ಆಗಿರುತ್ತದೆ ಎನ್ನುತ್ತಾರೆ. ಸದರಿ ದೂರವಾಣಿ ಸಂಭಾಷಣೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಮಾಡಬಹುದು. ನಾನು ಹೇಳಿದಂತೆ ಮುರಳಿರವರು ದಿಃ 07.10.2020 ರಂದು ನೋಂದಣಿಗೆ ಬನ್ನಿ ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ.

**6.** ನಾನು ಪ್ರತಿವಾದಿಗಳಿಗೆ ಕ್ರಯದ ಹಣ ಕೊಡಲು ಬಾಕಿಯಿದ್ದು ಹಾಗೂ Maintenance charge ಕೊಡಲು ಬಾಕಿಯಿದ್ದು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಾಕಾಶ ಕೋರಿದ್ದು, ಸಮಯಾವಾಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**